1335

ಮೈಸೂರ ಗೆಜಿಟ್.

ನಂ. 39] ಸರ್ಕಾರದಿಂದ ಪ್ರಾಮುಖ್ಯವಿದ್ದು. [ನಂ. 34.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 25, ಸನ್ 1904

III ನೆ ಭಾಗ.

ಮೈಸೂರು ಶ್ರೀಮತ್ ಮಹಾರಾಜರವರ ಗವರ್ನಮೆಂಟ್.

ಲೆಜಿಸ್ಲೆಟಿವ್ ಇಲಾಖೆ.

ಇಸ್ತಿಹಾರ್‌ನಾಮೆ, ನಂ. 1058–41–2, ಮು.

ತಾರೀಖು 6ನೆ ಆಗಸ್ಟು 1904.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟೀ ಯವರಿಂದ ಮಾಡಲ್ಪಟ್ಟಿರುವ ಈ ಕೆಳಗಿನ ಬಳನಿಬಂಧನೆಗಳು 1903ನೆ ಯ ಇಸವಿಯ III‌ನೆಯ ನಂಬರ್ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ರೆಗ್ಯುಲೇಷನಿನ 39ನೆಯ ಪ್ರಕರಣದ 2ನೆಯ ಅಧಿಕರಣಕ್ಕನುಸಾರವಾಗಿ ಪ್ರಕಟಿಸಲ್ಪಟ್ಟಿರುತ್ತವೆ. ಮತ್ತು ಪ್ರಥಮ ಪ್ರಕಟನವಾದ ಮೂರುವಾರಗಳಾದ ಮೇಲೆ ಗವರ್ನ್‌ಮೆಂಟಿನವರಿಂದ ಪರ್ಯಾಲೋಚಿಸಲ್ಪಡುತ್ತವೆ.

ಹುಕುಂ ಬಮೋಜೀಬ್.

ಬಿ. ಕೆ. ವೆಂಕಟವರದಯ್ಯಂಗಾರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.

1903ನೆ ಇಸವಿಯ III‌ನೆ ಅಂದರೆ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ರೆಗ್ಯುಲೇಷನ್ನಿನ 39ನೆ ಪ್ರಕರಣವನ್ನನುಸರಿಸಿ ಮಾಡಲ್ಪಟ್ಟ ಕಟ್ಟಡಗಳ ಬೈಲಾಸ್ ಯಾನೆ ಉಪನಿಬಂಧನೆಗಳು.

ಈ ಉಪನಿಬಂಧನೆಗಳಲ್ಲಿ "ಕಟ್ಟಡ" ಎಂಬ ಪದಕ್ಕೆ ಯಾವದಾದರು ಮನೆ, ಗುಡಸಲು, ಜೋಪಡಿ, ಗೋಡೆ ಅಥವ ಮನುಷ್ಯರ ವಾಸಕ್ಕಾಗಿ ಯಾಗಲಿ ಯ ಇತರ ಕಾರ್ಯಕ್ಕಾಗಿ ಯಾಗಲಿ ಉಪಯೋಗಿಸಲ್ಪಡುವ ಜಾವಣೀವುಳ್ಳ ಯ ಇಲ್ಲದ ಆವರಣಗಳು, ಎಂದು ಅರ್ಥವಾಗತಕ್ಕದ್ದು.

"ಬೀದಿ" ಎಂಬುವುದು ಅದರ ಪಾರ್ಶ್ವಭಾಗದ ಚರಂಡಿಗಳನ್ನು ಸಹ ಆಡಗಿಸಿಕ್ಕೊಂಡಿರತಕ್ಕದ್ದು.

ಕಟ್ಟುತಕ್ಕ ಉದ್ದೇಶವನ್ನು ಕುರಿತು ನೋಟೀಸು ಕೊಡತಕ್ಕ ವಿಧಾನ.

1. ಯಾವ ಕಟ್ಟಡವನ್ನಾದರು ಕಟ್ಟುವದಕ್ಕಾಗಲಿ ಅಥವಾ ಪುನಹ ಕಟ್ಟುವದಕ್ಕಾಗಲಿ ಉದ್ದೇಶವುಳ್ಳಂಥ ಪ್ರತಿಯೊಬ್ಬ ಮನುಷ್ಯನು, ತನ್ನ ಉದ್ದೇಶವನ್ನು ಕುರಿತು ಲಿಖಿತಮೂಲಕ ಟ್ರಸ್ಟ್ಯು ಜೋರ್ಡಿನ ಚೇರ್‌ಮೆರಿಗೆ ನೋಟೀಸು ಕೊಡತಕ್ಕದ್ದು.

ನೋಟೀಸಿನ ಸಂಗಡ ಕಳುಹಿಸತಕ್ಕ ಪ್ಲಾನ್‌ಗಳು.

2. (1) ಮೇಲ್ಕಂಡ ನೋಟೀಸಿನ ಸಂಗಡ ಬೋರ್ಡಿನ ಸರ್ವೆಯರ್ (ಯಾನೆ ವೈ.ಜಣಿದಾರರಲ್ಲೊಬ್ಬ) ರಿಂದ, ಬಂದು ಆಂಗುಲಕ್ಕೆ 10 ಅಡಿಗೆ ಕಡಿಮೆಯಿಲ್ಲದಂತೆ ತಗಯಲ್ಪಟ್ಟಿದ್ದಾಗಿಯೂ, ಮತ್ತು

(*a*) ಜಮೀನಿನ ಮೇಲೆ ಯಾವ ಕಟ್ಟಡಗಳಾದರೂ ಹಾಲಿ ಇದ್ದಲ್ಲಿ, ಅಂಥ ದರೋಬಸ್ತು ಕಟ್ಟಡಗಳ, ಮತ್ತು ಸದರಿ ಜಮೀನಿನ ಮೇಲೆ ಕಟ್ಟಲ್ಪಡಬೇಕಾದ ಕಟ್ಟಡ ವ ಇದಕ್ಕೆ ಸೇರಿದ ಹೊರಗಿನ ಉಪಕಟ್ಟಡಗಳ ಸ್ಥಾನ, ಸ್ವಭಾವ ಮತ್ತು ಉಪಯೋಗವನ್ನು ;

(*b*) ಉದ್ದೇಶಿಸಿರುವ ಕಟ್ಟಡ ವ ಉಪಕಟ್ಟಡಗಳಿಂದ ಆವರಿತವಾಗತಕ್ಕ ಜಮೀನಿನ ವಿಸ್ತೀರ್ಣವನ್ನು ;

(*c*) ಪಕ್ಕದಲ್ಲಿರುವ ರಸ್ತೆ, ಬೀದಿ, ಸೇತುವೆ, ಮೊಹರಿ ಯ ಕಟ್ಟಡ, ಇವುಗಳಿಗೆ ಹೆಸರುಗಳು ಯಾವದಾದರೂ ಇದ್ದರೆ, ಆ ಹೆಸರುಗಳನ್ನು ಅಥವಾ ಅವುಗಳ ವಿವರಣೆಯನ್ನು ;

(*d*) ಇಂಪ್ರೂವ್‌ಮೆಂಟ್ ಕಮ್ಮಿಟಿ ಯವರಿಂದ ತಯಾರ್ಮಾಡಲ್ಪಟ್ಟ ಮ್ಯಾಪ್ ಯಾನೆ ಪಠಗಳಲ್ಲಿ ವ ತಖ್ತೆಗಳಲ್ಲಿ ಆಜಾಗಕ್ಕೆ ಕಾಣಿಸಿರುವ ನಂಬರನ್ನು, ಮತ್ತು ಸದರಿ ಜಮೀನು ಇಪತಕ್ಕ ತುಕಡಿ ವ ಬೀದಿ ಅಥವಾ ರಸ್ತೆಯ ಹೆಸರು ಯ ನಂಬರ್‌ಗಳನ್ನು ;

ತೋರಿಸುವದಾಗಿಯೂ ಇರುವ ಆ ಜಮೀನಿನ ಬಂದು ಸೈಟ್ ಪ್ಲ್ಯಾನ್ ಯಾನೆ ಸ್ಥಾನ ನಕ್ಷೆಯನ್ನು, ಅಂಥಾ ಪ್ರತಿಯೊಬ್ಬ ಮನುಷ್ಯನು ಕಳುಹಿಸಿಕೊಡತಕ್ಕದ್ದು.

(2) (*a*) ಜಮೀನು ಸರ್ಕಾರ, ಮ್ಯುನಿಸಿಪಾಲಿಟಿ, ಅಥವಾ ಟ್ರಸ್ಟಿಗೆ ಕೇರ್‌ದ್ದಾಗಿದ್ದರೆ, ಅಂಥಾ ಪ್ರತಿಯೊಬ್ಬ ಮನುಷ್ಯನು ಮೇಲ್ಕಂಡ ನೋಟೀಸ್ ನೊಂದಿಗೆ, ಸದರಿ ಜಮೀನನ್ನು ಅನುಭವಿಸಲು ತನಿಗೆ ಅಧಿಕಾರವನ್ನು ಕಲ್ಪಿಸಿರುವ ದಸ್ತೈವೇಜು ಯ ದಸ್ತೈವೇಜುಗಳ ಪ್ರಾಮಾಣಿಕ ನಕಲನ್ನು, ಮತ್ತು ಟ್ರಸ್ಟಿಗಳು ಸದರಿ ದಸ್ತೈವೇಜು ಯ ದಸ್ತೈವೇಜುಗಳನ್ನು ನೋಡಲಿಕ್ಕೆ (ಇರಾದೆಪಟ್ಟು) ಆಬ್ಜೆ ಅವರು ಖಾಯಿಷ್ ಮಾಡಿದಲ್ಲಿ, ಆಸಲು ದಸ್ತೈವೇಜು ಯ ದಸ್ತೈವೇಜುಗಳನ್ನು ಕಳುಹಿಸಿಕೊಡತಕ್ಕದ್ದು.

(*b*) ಮೇಲ್ಕಂಡ ಪ್ರಮಾಣಿಕ ನಕಲುಗಳು ಸಂದರ್ಭಾನುಸಾರ, ಡೆಪ್ಯುಟಿ ಕಮಿಷನರ್‌ರಿಂದಲಾಗಲಿ, ಮ್ಯುನಿಸಿಪ್ಯಾಲಟಿ ಪ್ರೆಸಿಡೆಂಟ್ ಯ ವೈಸ್‌ಪ್ರೆಸಿಡೆಂಟ್‌ರಿಂದಲಾಗಲಿ, ಅಥವಾ ಜೇರ್ಮೆರಿಂದಲಾಗಲಿ ದಸ್ಕತ್ ಮಾಡಲ್ಪಡಬೇಕು.

(3) (*a*) ಮೇಲ್ಕಂಡ ನೋಟೀಸಿನ ಸಂಗಡ, ಜೋರ್ಡಿನ ಸರ್ವೆಯರ್ (ಯಾನೆ ಮೋಜಣಿದಾರನಿಂದ) ಅಂಗುಲ ಇಂದಕ್ಕೆ ೧ ಅಡಿಗೆ ಕಡಿಮೆ ಇಲ್ಲದ ಪ್ರಮಾಣದ ಮೇರೆಗೆ ಹೆಗೆಯಲ್ಪಟ್ಟದ್ದಾಗಿಯೂ, ಮತ್ತು ಪಕ್ಕದ ರಸ್ತೆ ಅಥವಾ ಬೀದಿಗಳ ಮೇಲ್ಕಟ್ಟಕ್ಕೆ, ತಳಾದಿಯೂ ಮತ್ತು ಎಲ್ಲಕ್ಕೂ ಕೀಳ್ಪಟ್ಟೆ ತಳವರಸೆ ಯ ಪ್ಲಿಂತ್ ಯಾನೆ ಗದ್ದಿಗೆ ಕಲ್ಲು ಸಹಾ ಯಾವ ಮಟ್ಟದಲ್ಲಿ ಇಡಬೇಕೆಂದು ಉದ್ದೇಶಿಸಲ್ಪಟ್ಟಿರುವದೊ, ಆ ಮಟ್ಟಗಳನ್ನು ಮತ್ತು ಮನೆ ಕಟ್ಟತಕ್ಕ ಸ್ಥಳದ ಮಟ್ಟವನ್ನು ತೋರಿಸುವಂಥಾದ್ದಾಗಿಯೂ, ಇರುವ ಪ್ಲ್ಯಾನ್ಸ್‌ಯಾನೆ ನಕ್ಷೆಗಳು, ಸೆಕ್ಷನ್ಸ್ ಯಾನೆ ನಮೂನೆಗಳು, ವ ಎಲಿವೇಷನ್ಸ್‌ಯಾನೆ ಪ್ರಮಾಣ ದರ್ಶಗಳು. ಇವುಗಳ ದ್ವಿಪ್ರತಿಗಳನ್ನು, ಅಂಥಾ ಪ್ರತಿಯೊಬ್ಬ ಮನುಷ್ಯನು ಹಾಜರ್ಮಾಡತಕ್ಕದ್ದು.

(*b*) ಉದ್ದೇಶಿಸಿರುವ ಕಟ್ಟಡದ ಸೇರಪ್ಪು ಯ ಮುಂಭಾಗವು, ಸದರಿ ಕಟ್ಟಡವು ಎದುರು ಸೋಡುವ ಬೀದಿ ಅಥವಾ ರಸ್ತೆಯ ಪಾರ್ಶ್ವಭಾಗದ ಚರಂಡಿಗಾಗಲಿ, ಪಕ್ಕದ ಚರಂಡಿ ಇಲ್ಲದಿದ್ದಲ್ಲಿ ಅಂಥಾ ಬೀದಿ ಅಥವಾ ರಸ್ತೆಯ ಮಧ್ಯರೇಖೆಗ ಆಗಲಿ ಯಾವ ಸ್ಥಾನದಲ್ಲಿ ನಿಲ್ಲುತ್ತೆಯೋ ಅದನ್ನು ಸಹಾ ಮೇಲ್ಕಂಡ ಪ್ಲ್ಯಾನ್ಸ್‌ಯಾನೆ ನಕ್ಷೆಗಳು ಮತ್ತು ಸೆಕ್ಷನ್ಸ್‌ಯಾನೆ ನಮೂನೆಗಳು ತೋರಿಸತಕ್ಕದ್ದು.

(4) ಅಂಥಾ ಪ್ರತಿಯೊಬ್ಬ ಮನುಷ್ಯನು ಜೇರ್ಮೆರಿಂದ ಖಾಯಿಷ್ ಮಾಡಲ್ಪಟ್ಟಾಗ, ಮೇಲ್ಕಂಡ ನೋಟೀಸಿನ ಸಂಗಡ, ಕಟ್ಟುವದಕ್ಕೆ ಉದ್ದೇಶಿಸಿರುವ ಕೆಲಸವನ್ನು ಕುರಿತೂನೂ, ಮತ್ತು ತಳಾದಿಗಳಿಗೂ, ಗೋಡೆಗಳಿಗೂ, ಮ ಚಾವಣಿಗಳಿಗೂ ಉಪಯೋಗಿಸತಕ್ಕ ಸಾಮಾನುಗಳನ್ನು ಕುರಿತೂನೂ, ತಪ್ಸೀಲ್ ವಿವರಣೆಗಳನ್ನು ಕಳುಹಿಸಿಕೊಡತಕ್ಕದ್ದು.

3. ಈ ನಿಬಂಧನೆಗಳ ಯ ಅವುಗಳ ಅವಶ್ಯಕತೆಗಳ ಸಂಬಂಧವಾದ ಯಾವದಾದರು ವಿಷಯದ ಸರಿಯಾದ ಅಭಿಪ್ರಾಯ ಯ ಅರ್ಥದ ವಿಚಾರವಾಗಿ ಯಾವ ಮನುಷ್ಯನಿಗಾದರು ತೊಡಕು ಯ ಸಂದೇಹವೇನಾದರೂ ಇದ್ದರೆ, ಅಂಥಾವನು ಯಾವದಾದರು ಕಟ್ಟಡವನ್ನು ಕಟ್ಟುವದಕ್ಕಾಗಲಿ ಅಥವಾ ಪುನಶ್ಚ ಕಟ್ಟುವದಕ್ಕಾಗಲಿ ತನ್ನ ಉದ್ದೇಶವನ್ನು ಕುರಿತು ಲಿಖಿತಮೂಲಕ ನೋಟೀಸನ್ನು ಕೊಡುವದಕ್ಕೆ ಮುಂಚಿತವಾಗಿ, ಜೇರ್ಮೆರಿಗೆ ದರಖಾಸ್ತು ಮಾಡಿಕೊಳ್ಳಬಹುದು. ಅಂಥಾ ದರಖಾಸ್ತು ತಲುಪಲು, ಜೇರ್ಮೆರು ಸದರಿ ಮನುಷ್ಯನಿಗೆ ಆಯಾ ಸಂದರ್ಭಗಳಲ್ಲಿ ಅವಶ್ಯಕವಾಗಿರುವ ತಿಳುವಳಿಕೆಯನ್ನು ಕೊಡತಕ್ಕದ್ದು.

4. ಮುಖಮುಂತಾದ ವಸ್ತುಗಳಿಂದಲಾಗಲಿ, ಸತ್ತ ಮೃಗಗಳ ಕವಗಳಿಂದಲಾಗಲೀ, ಅಥವಾ ಕಚರ ಯ ಉಪದ್ರಕರವಾದ ಇತರ ವಸ್ತುವಿನಿಂದಲಾಗಲೀ ತುಂಬಲ್ಪಟ್ಟಿರುವ ಅಥವಾ ಸದರಿ ವಸ್ತುಗಳನ್ನು ಕೂಡಿಹಾಕತಕ್ಕ ಸ್ಥಳವಾಗಿ ಉಪಯೋಗಿಸಲ್ಪಟ್ಟಿರುವ ಯಾವ ಸ್ಥಳದ ಮೇಲೂ, ಹೊಸ ಕಟ್ಟಡವನ್ನು ಕಟ್ಟುತಕ್ಕ ಮನುಷ್ಯನು ಅಂಥಾ ವಸ್ತುಗಳು ಜೇರ್ಮೆರ ತೃಪ್ತಿಕರವಾಗಿ, ಸರಿಯಾಗಿ ತೆಗದುಹಾಕಲ್ಪಟ್ಟಹೊರ್ತು, ಅಥವಾ ಸದರಿ ವಸ್ತುಗಳು ದುರ್ಗುಣರಹಿತವಾಗಿವೆಯೆಂದು ಅವರು ಅಭಿಪ್ರಾಯಪಟ್ಟಹೊರ್ತು, ಯಾವ ಹೊಸ ತಳಾದಿಯನ್ನು ಹಾಕತಕ್ಕದ್ದಲ್ಲವೆ.

ಕಚರಾವನ್ನು ಹೊಸ ತಳಾದಿಗಳಿಂದ ಆಚೆಗೆ ಸಾಗಿಸತಕ್ಕದ್ದು.

127

5. ಮ್ಯುನಿಸಿಪಲ್ ರೆಗ್ಯುಲೇಷನ್ನಿನ 115, 116 ಮತ್ತು 148ನೇ ಪ್ರಕರಣಗಳ ಅರ್ಥದನುಸಾರವಾಗಿ ಕಟ್ಟಡಗಳನ್ನು ಕಟ್ಟುವವರಿಗೆ ಉದ್ದೇಶಿಸುವ ಜನರಿಂದ ಕೆಲವು ನೋಟೀಸುಗಳು ಕೊಡಲ್ಪಡಬೇಕಾದ ವಿಷಯ.

ಕಟ್ಟುವ ಪ್ರತಿಯೊಬ್ಬ ಮನುಷ್ಯನು, ಕಟ್ಟಡವ ಪಕ್ಕಾದಿಂದ ಯಾವುದನ್ನಾದರೂ ತುಂಬಲು ಉಪಕ್ರಮಿಸುವದಕ್ಕೆ ಮುಂದಾಗಿ ಅಂಥಾ ತಳಾದಿಯನ್ನು ಅಂಥಾ ಮನುಷ್ಯನು ತುಂಬಲು ಉಪಕ್ರಮಿಸುವ ತೇದಿಯನ್ನು ನಮೂದಿಸಿ ಬರಹ ಮೂಲಕ ನೋಟೀಸನ್ನು ಜೇರ್ಮೆರಿಗೆ, ಅವರ ಆಫೀಸಿನಲ್ಲಿ ಪಾವತಿ ಮಾಡತಕ್ಕದ್ದು ಯ ಕಳುಹಿಸತಕ್ಕದ್ದು, ಅಥವಾ ಪಾವತಿಯಾಗುವಂತೆ ಯ ಕಳುಹಿಸುವಂತೆ ಮಾಡತಕ್ಕದ್ದು.

ತಳಾದಿಗಳನ್ನು ಮುಚ್ಚುವದರ ವಿಷಯವಾಗಿ ನೋಟೀಸು.

6. ವಾಸಕ್ಕಾಗಿ ಹೊಸಕಟ್ಟಡವನ್ನು ಪ್ಲಿಂತ್ ಯಾನೆ ಗದ್ದಿಗೆಕಲ್ಲಿನ ಮಟ್ಟ.

ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು ಸುತ್ತಲಿರುವ ಭೂಮಿಯ ಸಾಮಾನ್ಯ ಮಟ್ಟದ ಮೇಲೆ $1\frac{1}{4}$ ಅಡಿಗೆ ಕಡಿಮೆ ಇಲ್ಲದಂತೆಯೂ, ಮತ್ತು ಪಾರ್ಶ್ವ ಭಾಗದ ಜರಕಡಿಯ ಮೇಲ್ಭಾಗವನ್ನು ವಿಸ್ತಾರ $1\frac{1}{2}$ ಅಡಿಯಷ್ಟು ಇರುವಂತೆಯೂ ಪ್ಲಿಂತ್ ಯಾನೆ ಗದ್ದಿಗೆಕಲ್ಲನ್ನು ಇಟ್ಟು ಸದರಿ ಕಟ್ಟಡವನ್ನು ಕಟ್ಟಿಸತಕ್ಕದ್ದು.

7. ಹಿಂದಿನ ಪ್ರಕರಣಗಳ ನಿಬಂಧನೆಗಳನ್ನನುಸರಿಸಿ, ಜೇರ್ಮೆರಿಗೆ ಯಾವದಾದರೂ ಪ್ಲಾನ್ ಯಾನೆ ನಕ್ಷೆಯ ಇತರ ದಸ್ತೈವೇಜನ್ನು ಒದಗಿಸಲ್ಪಡಬೇಕೆಂದು ಖಾಯಿಷ್ಮಾಡಲ್ಪಡುವ ಪ್ರತಿಯೊಬ್ಬ ಮನುಷ್ಯನು, ತಾನು ಒದಗಿಸಬೇಕೆಂದು ಅನುಜ್ಞೆಸಲ್ಪಟ್ಟಂಥ ಪ್ರತಿಯೊಂದು ಪ್ಲಾನ್ ಯಾನೆ ನಕ್ಷೆ ಯ ಇತರ ದಸ್ತೈವೇಜಿನ ನಕಲುಗಳ ದ್ವಿಪ್ರತಿಗಳನ್ನು ಒದಗಿಸತಕ್ಕದ್ದು. ಅಂಥಾ ಪ್ಲಾನ್ ಯಾನೆ ನಕ್ಷೆ ಯ ಇತರ ದಸ್ತೈವೇಜುಗಳ ದ್ವಿಪ್ರತಿಗಳ ಸೈಕಿ ಜೇರ್ಮೆರಿಂದ ಸದರಿ ಪ್ಲಾನ್ ಯಾನೆ ನಕ್ಷೆಯು ಮಂಜೂರಾಗಿರುವದನ್ನು, ಇಲ್ಲದಿರುವದನ್ನು ಸೂಚಿಸುವಂತೆ, ಬಂದು ಪ್ರತಿಯು ಅವರಿಂದ ದಸ್ಕತ್ ಮಾಡಲ್ಪಟ್ಟು ಸದರಿ ಮನುಷ್ಯನಿಗೆ ವಾಪಸು ಮಾಡಲ್ಪಡತಕ್ಕದ್ದು. ಕಟ್ಟಡದ ಅಂದಾಜಿನ ಬೆಲೆಮೇಲೆ ಕೇಕಡ $\frac{1}{4}$ರ ಮೇರಿಗೆ ಪಾವತಿಯಾದಲ್ಲಿ, ಬೋರ್ಡಿನ ಸರ್ವೆಯರ್ ಯಾನೆ ಮೋಜಣಿದಾರನ್ನು, ಅವಶ್ಯಕವಾದ ಮೋಜಣಿಗಳನ್ನು ಮತ್ತು ಮಟ್ಟಗಳನ್ನು ತೆಗೆಯುವಂತೆ ಆಜ್ಞಾಪಿಸಲ್ಪಡುವನು.

8. ಯಾವ ಹೊಸಕಟ್ಟಡದ ರಸ್ತೆಕಡೆ ಗೋಡೆ ಪಾರ್ಶ್ವವು ಪಾರ್ಶ್ವಭಾಗದ ಜರಕಡಿಯಿಂದ $1\frac{1}{2}$ ಅಡಿಯಷ್ಟು ಬಿಡದೆ ಇರುವದೋ, ಅಂಥಾ ಹೊಸಕಟ್ಟಡವು ಯಾವ ಮನುಷ್ಯನಿಂದಲೂ ಕಟ್ಟಲ್ಪಡಕೂಡದು. ಅಂಥಾ ಕಟ್ಟಡದ ಪ್ರತಿಯೊಂದು ಗೋಡೆಯು, ಮತ್ತು ಕೆಳಗಿನ ನೆಲದ ಪ್ರತಿಯೊಂದು ಕಂಭವು ಯಾ ಕಂಭಗಳು ಗಟ್ಟಿಯಾದ ನೆಲದಮೇಲೆಯಾದರೂ, ಸಾಕಾದಷ್ಟು ಮಂದವುಳ್ಳ ಕಾಂಕ್ರೀಟಿಯಾನೆ ವಜ್ರಗಾರೆ ಮೇಲೆಯಾದರೂ, ಅಥವಾ ತಳಾದಿಯಂತಿರುವ ಯಾವದಾದರೂ ಬಲಹೀನವಲ್ಲದ ಸಾಕಾದ ಕೆಳಕಟ್ಟಿದು ಮೇಲೆಯಾದರೂ ನಿಲ್ಲತಕ್ಕದ್ದು. ಅಲ್ಲದೆ, ಬೇಕಾದ ಸಂದರ್ಭಗಳಲ್ಲಿ ಖಾಯಗಳಿಗೆ ಫ್ರೋಟಿಂಗ್ಸ್ ಯಾನೆ ನೆಲೆಗಳು ಇಡಲ್ಪಡತಕ್ಕದ್ದು.

ಗೋಡೆಗಳ ಖಾಯಗಳು.

9. ಹೊಸ ವಾಸದ ಮನೆಯನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ವಾಸದ ಮನೆಯನ್ನು, ವಾಸಮಾಡುವದಕ್ಕೆ ಉದ್ದೇಶಿಸಲ್ಪಟ್ಟಿರುವ ಅದರ ಪ್ರತಿಯೊಂದು ಕೊಠಡಿಯ ಎಲ್ಲಾಭಾಗವು, ಯ ಕನಿಷ್ಠ ಪಕ್ಷ ಬಂದು ಪಕ್ಕವು ಹೊರಗಿನ ಬೈಲು ಪ್ರದೇಶಕ್ಕೆ ಒತ್ತಿಕೊಂಡಿರುವ ಹೊರಪಾರ್ಶ್ವದ ಗೋಡೆಯಾಗಿ ಇರತಕ್ಕದ್ದಾಗಿಯಾದರೂ, ಅಥವಾ ಒಳಗಿನ ಖಾಲಿ ಜಾಗಾಕ್ಕೆ ಒತ್ತಿಕೊಂಡಿರುವ ಎಲ್ಲಾ ಕೊಠಡಿಗಳ ಒಟ್ಟು ನೆಲವಿಸ್ತೀರ್ಣದ ದಶಾಂಕಕ್ಕೆ ಕಡಿಮೆ ಇಲ್ಲದಷ್ಟು ವಿಸ್ತಾರವನ್ನುಳ್ಳದ್ದಾಗಿಯೂ, ಯಾವ ದಿಕೆ ನಲ್ಲೂ ಅಡ್ಡಳತೆ 6 ಅಡಿಗಳಿಗೆ ಕಡಿಮೆ ಇಲ್ಲದಂತೆಯೂ, ಇರುವ ಒಳ ಅಂಗಣಕ್ಕೆ ಒತ್ತಿಕೊಂಡಿರುವಂಥಾದ್ದಾಗಿಯಾದರೂ, ಇರುವಂತೆ ಕಟ್ಟತಕ್ಕದ್ದು.

ವಾಸದ ಮನೆಗಳ ಸುತ್ತ ಇರಬೇಕಾದ ಬೈಲು ಪ್ರದೇಶಗಳು.

10. ಅಂಥವನು ಹೊರಪಾರ್ಶ್ವದ ಕನಿಷ್ಠಪಕ್ಷ ಎರಡು ಗೋಡೆಗಳಿಗೂ ಮತ್ತು ಮಾಲೀಕನ ವಶಾರದ ಹದ್ದುಗಡಿಗೂ ಮಧ್ಯೆ, ಅಂಥ ಗೋಡೆಗಳಲ್ಲಿ ಯಾವದಾರೂ ಒಂದು ಅಡ್ಡಗಲದಲ್ಲಿ 15 ಅಡಿಗಿಂತಲೂ ಕಡಿಮೆಯಾಗಿರದಿರುವ ಬೀದಿಗೆ ಅಭಿಮುಖವಾಗಿ ಇದ್ದಹೊರ್ತು, ಅಂಥ ಗೋಡೆಯನ್ನು ಉದ್ದಕ್ಕೂ ವಿಸ್ತರಿಸತಕ್ಕ, ಅಥವಾ ಪಕ್ಷ 6 ಅಡಿ ಅಡ್ಡಗಲವುಳ್ಳ ಖಾಲಿ ಜಾಗವನ್ನು ಬಿಡತಕ್ಕದ್ದು. ಈ ಉಪನಿಬಂಧನೆಯಿಂದ ನಿರ್ದೇಶಿಸಲ್ಪಡುವ ಪ್ರತಿಯೊಂದು ಒಳ ಅಂಗಣವನ್ನು ಅಂಥವನು ಕಲ್ಲಿಸಿ, ಯಾವ ಕಟ್ಟಗಳೂ ಅದರಲ್ಲಿರದಂತೆಯೂ ಮತ್ತು ಅಂತರಿಕ್ಷಕ್ಕೆ ತೆರೆಯಲ್ಪಟ್ಟಿರುವಂತೆಯೂ ಅದನ್ನು ಇಡಿಸತಕ್ಕದ್ದು. ಮತ್ತು ಕಪೋತ, ಚಾವಣಿ ಯ ಗಾಳಿಮರೆ, ಇವು ಯಾವದೂನೂ ಮೇಲ್ಕಂಡ ಖಾಲಿ ಜಾಗದ ಯಾವ ಕಡೆಯಲ್ಲೂ ಬಂದು ಅಡಿ 6 ಅಂಗುಲಗಳಿಗಿಂತ ಮಿಗಿ ಮುಂದಕ್ಕೆ ಉಬ್ಬಿಕೊಂಡಾದರೂ ಅಥವಾ ಮೇಲಿಂದ ಬೊಗ್ಗಿಕೊಂಡಾದರೂ ಇರಕೂಡದು. ಆದರೆ, ಈ ಕೂಡಿಸತಕ್ಕ ಹಾದಿಗಳು ಖಂದು, ಯ ಎರಡು ಪಕ್ಕಗಳಲ್ಲಿ ಖಾಲಿ ಬಿಡಲ್ಪಟ್ಟಿದ್ದಲ್ಲಿ, ಅಂಥಾ ಯಾವ ಹಾದಿಗಳನ್ನು ಜೇರ್ಮೆರು ಅವಶ್ಯಕವೆಂದು ಎಣಿಸುವರೊ ಅಂಥವುಗಳು ಇಡಲ್ಪಡಬಹುದು.

11. ಬಡಾವಣೆಗಳಲ್ಲಿ, 30 ಅಡಿ ಅಗಲ 50 ಅಡಿ ಉದ್ದಕ್ಕೆ ಕೆಡಿಮೆಯಾದ ಜಾಗಾಗಳ ಮೇಲೆ, ಯಾವ ಕಟ್ಟಡವೂ ಕಟ್ಟಲ್ಪಡಲಾಗದು.

ಕೊಠಡಿಗಳ ಉನ್ನತ.

12. ಅಂಥ ಕಟ್ಟಡದಲ್ಲಿ ವಾಸಕ್ಕೆಂದು ಉದ್ದೇಶಿಸರುವ ಪ್ರತಿಯೊಂದು ಕೊಠಡಿಯನ್ನು ಅಂಥವನು ಅದರ ಮಾಳಿಗೆಯಲ್ಲಿನ ಬಂದು ಕೊಠಡಿವಿನಹ, ನೆಲದಿಂದ ಅಟ್ಟದವರೆಗೆ ಪ್ರತಿಭಾಗವು ಕನಿಷ್ಠಪಕ್ಷ 8 ಅಡಿ ಎತ್ತರವಾಗಿರುವಂತೆ ಕಟ್ಟತಕ್ಕದ್ದು.

13. ಅಂಥ ಕಟ್ಟಡದ ಅಂಥ ಮಾಳಿಗೆಯಲ್ಲಿನ ಪ್ರತಿಯೊಂದು ಕೊಠಡಿಯನ್ನು, ಅಂಥವನು ಸದರಿ ಕೊಠಡಿಯು ತಳವರ ಪೆಯಿಂದ ಅಟ್ಟುದವರಿಗೆ ಕನಿಷ್ಠಪಕ್ಷ ಸರಾಸರಿ 7 ಅಡಿ ಎತ್ತರವನ್ನು ಉಳ್ಳದ್ದಾಗಿರುವಂತೆ ಕಟ್ಟುತಕ್ಕದ್ದು.

14. ಕಟ್ಟಡಗಳ ಸೂರುಗಳು, ಕಿಟಕಿಗಳ ಸರ್ಪೇಡಿಯಾನೆ ಬಿಸಲು ಮರೆಗಳು, ಮಾಳಿಗೆಯ ನೀರನ್ನು ಹಾಯಿಸುವ ದೋ ಣಿಗಳು, ಮನೆಯ ಅಂಚಿನಲ್ಲಿರುವ ರಸ್ತೆಯ ಪಾರ್ಶ್ವಭಾಗದ ಚರಂಡಿಯನ್ನು ಅತಿಕ್ರಮಿಸಿ ಮುಂದಕ್ಕೆ ಬರಕೂಡದು.

15. ರಸ್ತೆಯಿಂದ ಪ್ಲಿತ್‌ಯಾನೆ ಗದ್ದಿಗೆ ಕಲ್ಲಿನ ಮೇಲಕ್ಕೆ ಹೋಗತಕ್ಕ ಮೆಟ್ಟುಗಳು ರಸ್ತೆಯ ಪಾರ್ಶ್ವಭಾಗದ ಚರಂ ಡಿಯ ಹೊರಗಡೆಯ ಅಂಚನ್ನು ಬಿಟ್ಟು ಮುಂದಕ್ಕೆ ಬರತಕ್ಕದ್ದಲ್ಲವೆ.

16. ರಸ್ತೆಯ ಪಾರ್ಶ್ವಭಾಗದ ಚರಂಡಿಯ ಹೊರಅಂಚಿನಿಂದಾಚಿಗೆ ಹಂಗಾಮಿಯಾವ ಯ ಖಾಯಂ ಆದ ಸರ್ಪೇಡಿಯಾನೆ ಬಿಸಲು ಮರೆಗಳ್ವಾವದೂ ಅಂಗಡಿಗಳಿಗೆ ಹಾಕಲ್ಪಡಕೂಡದು.

17. ಚಾವಣಿ ವರಿಗೂ ಎತ್ತಲ್ಪಡದಿರುವ ಬಂದು ವಿಭಾಗದ ಗೋಡೆ ಮುಖಾಂತರವಾಗಿಯಾಗಲೀ, ಅಥವಾ ಸಂಸರ್ಗವ ನ್ನು ಸುತರಾಂ ತಡೆಯುವದಕ್ಕಾಗದಿರುವಂಥ ಯಾವ ವಿಧದಿಂದಾಗಲೀ, ಬಂದು ಕೊಠಡಿಯಿಂದ ಮತ್ತೊಂದು ಕೊಠಡಿಗೆ ಮಾರ್ಗವಿದ್ದ ವಿನಹಾ, ಪ್ರತಿಯೊಂದು ಕೊ ಠಡಿಯನ್ನು, ಒಂದೊಂದು 80 ಚದರಡಿಗೆ ಕಡಿಮೆ ಇಲ್ಲದ ನೆಲ ವಿಸ್ತೀರ್ಣವುಳ್ಳ ದ್ದಾಗಿ ಕಟ್ಟುತಕ್ಕದ್ದು.

ಕೊಠಡಿಗಳ ನೆಲ ವಿಸ್ತೀರ್ಣ.

18. ಅಂಥವನು, ಅಂಥ ಪ್ರತಿಯೊಂದು ಕೊಠಡಿಯನ್ನು, ನೇರವಾಗಿ ಹೊರಗಡೆಯ ಗಾಳಿಗೆ ತೆರೆಯತಕ್ಕ ಮತ್ತು ತಳವ ರಿನೆ ಪ್ರದೇಶದ ವಿಸ್ತೀರ್ಣದಲ್ಲಿ ವಟ್ಟಿಗೆ ದಶಾಂಶಕ್ಕೆ ಕಡಿಮೆ ಇಲ್ಲದಷ್ಟು ಖುಲ್ಲಾ ಇರ ತಕ್ಕ ಕಿಟಕಿಗಳದ್ವಾರಗಳ ಮುಖಾಂತರ, ಸದರಿ ಕೊಠಡಿಗೆ ಗಾಳಿಯು ಬೀಸುತ್ತಿರು ವಂತೆ, ಕಟ್ಟುತಕ್ಕದ್ದು.

ಕೊಠಡಿಗಳ ಗಾಳಿ ಜಲನೆ.

19. ಪ್ರತಿಯೊಬ್ಬ ಮನೆ ಎಜಮಾನನು ತಾನು ಒಕ್ಕಲಿರುವ ಮನೆಯನ್ನು ಮತ್ತು ಅದಕ್ಕೆ ಲಗತ್ತಾದ ಜಮೀನುಗಳ ನ್ನು ಕಾಪಾಡಿಕೊಂಡು ಬರಲಿಕ್ಕೆ ಬದ್ಧನಾಗಿರುತ್ತಾನೆ. ಮನೆ ವ ಅದಕ್ಕೆ ಕೀರಿದ ಜಮೀನುಗಳ ಮಟ್ಟುದ ನೀರುವಾಟಕ್ಕೆ ಅನುಗತವಾಗಿ ಹರಿಯುವ ಅತ್ಯಂತ ಸಮೀ ಪದಲ್ಲಿರತಕ್ಕ ಬೀದಿಯ ಚರಂಡಿಗೆ ಮೊಳಿಗೆಯ ನೀರು ವ ಬಚ್ಚಲು ರೊಚ್ಚು ಸಾಗಿ ಬೀಳುವಂತೆ, ಸದರಿ ಮನೆ ವ ಮನೆಯ ಮೈದಾನದ ನೀರು ಹರಿದು ಹೋಗುವದಕ್ಕೋಸ್ಕರ ಚೇರ್ಮೆರಿಂದ ನಿಯಮಿಸಲ್ಪಡುವ ನಿರ್ಣಯದ ಮೇರಿಗೆ ಇರತಕ್ಕ ಬಂದು ಅನುಕೂಲವಾದ ಚರಂಡಿಯನ್ನು ಉಂಟಾದ್ದಾಗಿ, ದರೋಜಸ್ತು ವಹಾರಗಳು ಇರತಕ್ಕದ್ದು. ಮನೆಯ ಮಾಲೀಕನು ಅವಶ್ಯಕವಾದ ಚರಂಡಿ ಯ ಚರಂಡಿಗಳನ್ನು ಕಟ್ಟತಕ್ಕ ಬಗ್ಗೆ ಚೇರ್ಮೆರಿಂದ ಕೊಡಲ್ಪಡುವ ನೋಟೀಸ್ ತನಿಗೆ ಜಾರಿಯಾದ ತಾರೀಖು ಲಾಗಾಯಿತು 30 ದಿವಸಗಳ ಒಳಗಾಗಿ ಅಂಥ ಚರಂಡಿಗಳನ್ನು ಒದಗಿಸುವದಕ್ಕೂ ವ ಕಟ್ಟುವದ ಕ್ಕೂ ಬದ್ಧನಾಗಿರುತ್ತಾನೆ. ತಪ್ಪಿದಲ್ಲಿ, ನಷ್ಟಕ್ಕೂ ಲಾಗವಡಿಗೂ, ಮಾಲೀಕನನ್ನು ಗುರಿಪಡಿಸಿ, ಅವಶ್ಯಕವಾದ ಚರ-ಡಿ ಯ ಚರಂಡಿಗಳನ್ನು ಕಟ್ಟುವದಕ್ಕೆ ಅಪ್ಪಣೆ ಮಾಡಲು ಚೇರ್ಮೆನವರು ಅರ್ಹರಾಗಿರುವರು.

ಚರಂಡಿಗಳನ್ನು ಕಾಪಾಡಿಕೊಂಡು ಬರು ವಿಕೆ.

20. ಮನುಷ್ಯರ ವಾಸಕ್ಕಾಗಿಯಾದರೂ ಯ ಲಾಯಗಳಿಗಾದರೂ ಯ ಬೇರೆ ಯಾವಕೆಲಸಗಳಿಗಾದರೂ ಉಪಯೋಗಿಸ ಲ್ಪಡಬೇಕೆಂದಿರುವ ಗುಡಸಲುಗಳು ಯ ಜೋಪಡಿಗಳು ಅಥವಾ ಗುಡಸಲುಗಳ ಯ ಜೋಪಡಿಗಳ ಸಾಲುಗಳು ಯ ಗುಂಪುಗಳು, ಇವುಗಳನ್ನು ಕಟ್ಟುತಕ್ಕ ಪ್ರತಿ ಯೊಬ್ಬ ಮನುಷ್ಯನು, ಅಂಥವುಗಳನ್ನು, ಚೇರ್ಮೆರು ಅಪೇಕ್ಷಿಸಿದಲ್ಲಿ, ಅವುಗಳು ಕ್ರಮವಾದ ಶ್ರೇಣಿಗಳಾಗಿರುವಂತೆಯೂ ;

ಗುಡುಸಲುಗಳು, ಜೋಪಡಿಗಳು ಯ ಸಾಲ್ಕಟ್ಟಡಗಳು.

(1) ಅಂಥ ಪ್ರತಿ ಎರಡು ಶ್ರೇಣಿಗಳ ಮುಂಗಡೆಯೂ, ಮಧ್ಯೆದಲ್ಲಿಯೂ, ಗಾಳಿ ಬೀಸುವದಕ್ಕೂ ಮತ್ತು ಕಚರಾ ಎತ್ತುವದು ಸುಲಭವಾಗುವದಕ್ಕೂ ಎಷ್ಟು ಅಗಲವಿರಬೇಕೆಂದು ಚೇರ್ಮೆರು ಅಪ್ಪಣೆ ಮಾಡುತ್ತಾರೋ ಅಷ್ಟು ಅಗಲವುಳ್ಳಂಥ ಧಾರಾಳವಾದ ದಾರಿ ಯ ಮಾರ್ಗವನ್ನು ಉಂಟಾದ್ದಾಗಿಯೂ ;

(2) ಚೇರ್ಮೆರು ಅಪೇಕ್ಷಿಸುವಂಥ ವ ಅಪೇಕ್ಷಿಸುವಷ್ಟು ಪಾಯಿಖಾನೆಗಳು, ಕಕ್ಕಸುಗಳು ಯ ಪಿಷಾಬುಖಾನೆಗಳು ಮತ್ತು ಬಚ್ಚಲು ನೀರು ಹರಿದು ಹೋಗಲಿಕ್ಕೆ ಅಧಾರಗಳು, ಇವುಗಳನ್ನು ಉಂಟಾದದ್ದಾಗಿಯೂ ;

(3) ನೀರು ಹರಿದು ಹೋಗುವ ಅನುಕೂಲಕ್ಕೆ ಸಾಕಾದಷ್ಟು ಮಟ್ಟದಲ್ಲಿರುವಂಥಾದ್ದಾಗಿಯೂ ; ಕಟ್ಟುತಕ್ಕದ್ದು.

ಪಾಯಿಖಾನೆಗಳನ್ನು ಕಟ್ಟುತಕ್ಕ ವಿಷಯ ಪಾಯಿಖಾನೆಯ ವಸತಿ.

21. ಒಂದು ಹೊಸಕಟ್ಟಿಜವನ್ನು ಕಟ್ಟುತಕ್ಕ ಮನುಷ್ಯನು ಅಂಥ ಕಟ್ಟಣ ದ ಸಂಬಂಧವಾಗಿ, ಆಯಾ ಸಂದರ್ಭದಲ್ಲಿ ಚೇರ್ಮೆರಿಂದ ನಿರ್ಧರಿಸಲ್ಪಟ್ಟು, ಅವಶ್ಯ ಕವಾಗಿರುವಷ್ಟು ಪಾಯಿಖಾನೆ ಯ ಪಾಯಿಖಾನೆಗಳನ್ನು ಕಟ್ಟುತಕ್ಕದ್ದು.

ಪಾಯಿಖಾನೆಗಳ ಜಾಗ.

22. ಒಂದು ಕಟ್ಟಡವ ಸಂಬಂಧವಾಗಿಯಾಗಲಿ, ಅಥವಾ ಸಂಬಂಧವಿಲ್ಲದ ಯಾಗಲಿ, ಹೊಸ ಪಾಯಿಖಾನೆಯನ್ನು ಕಟ್ಟುತಕ್ಕ ಮನುಷ್ಯನು, ಅಂಥ ಪಾಯಿಖಾ ನೆಯನ್ನು ಚೇರ್ಮೆರಿಂದ ಮಂಜೂರ್ಮಾಡಲ್ಪಡುವ ಜಾಗ ಯಾ ಸ್ಥಳಲ್ಲಿದಯೇ ಕಟ್ಟು ತಕ್ಕದ್ದು.

347

1239

23. ಬಂದು ಕಟ್ಟಡದ ಸಂಬಂಧವಾಗಿ, ಯಾವ ಮನುಷ್ಯನು ಪಾಯಿಖಾನೆಯನ್ನು ಕಟ್ಟುವನೋ, ಅಂಥವನು ಚೇರ್ಮೆರ ಬರಹಮೂಲಕವಾದ ಅಪ್ಪಣೆ ಇಲ್ಲದೆ, ಯಾವದಾದರೂ ಛಾವಿಗೆ, ಬುಗ್ಗೆಗೆ, ಕೆರೆಗೆ ಅಥವಾ ಕುಡಿಯುವದಕ್ಕಾಗಲಿ, ಯಾ ಕೃಹಕೃತ್ಯದ ಕೆಲಸಗಳಿಗಾಗಲಿ, ಯಾ ಮನುಷ್ಯನ ಉಪಯೋಗಕ್ಕೆ ತಯಾರಾಗತಕ್ಕ ಪಾನಗಳಿಗಾಗಲಿ, ಮನುಷ್ಯನಿಂದ ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ನೀರಿನ ಕಾಲುವೆ 10 ಅಡಿ ಫಾಸಲೆಯೊಳಗಾದರೂ, ಅಥವಾ ಅಂಥ ನೀರನ್ನು ಕೆಡಿಸಲು ಅಸ್ಪದವನ್ನು ಉಂಟುಮಾಡುವಂಥ ಬೇರೆ ಯಾವ ಸ್ಥಳದಲ್ಲಿ ಯಾದರೂ, ಅಂಥ ಪಾಯಿಖಾನೆಯನ್ನು ಕಟ್ಟಕೂಡದು.

ನೀರಿನ ಸರಬರಾಯಿನ ಎಡೆಗೆ ಪಾಯಿಖಾನೆಗಳು ಸಮೀಪದಲ್ಲಿರುವಿಕೆ.

24. ಬಂದು ಕಟ್ಟಡದ ಸಂಬಂಧವಾಗಿ ಕಕ್ಕಸನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ಕಕ್ಕಸನ್ನು ಅದರ ಪ್ರವೇಶದ ಕಡೆ ವಿನಹ ಪ್ರತಿಯೊಂದು ಕಡೆಯಲ್ಲೂ, ಅಡ್ಡಗಲದಲ್ಲಿ 3 ಅಡಿಗೆ ಕಡಿಮೆ ಇಲ್ಲದ, ಮತ್ತು ಅಂತರಿಕ್ಷಕ್ಕೆ ತೆರೆಯಲ್ಪಟ್ಟ, ಖಾಲಿ ಸ್ಥಳವು ಬಿಟ್ಟಿರುವಂತ ಕಟ್ಟತಕ್ಕದ್ದು. ಅಂಥ ಪ್ರವೇಶದ ಕಡೆ, ಅಂಥ ಕಕ್ಕಸಿನೊಳಗೆ ಹೋಗುವ ಗ್ಯಾಲರಿಯಾನೆ ಅಂತರ್ದ್ವಾರ ಯಾ ಮಾರ್ಗವು, ಅಗಲದಲ್ಲಿ 2 ಅಡಿಗೆ ಕಡಿಮೆ ಇಲ್ಲದಂತೆಯೂ, ಮತ್ತು ಉಭಯ ಪಾರ್ಶ್ವದಲ್ಲೂ ಹೊರಗೆಡೆಯ ಗಾಳಿಗೆ ತೆರೆಯಲ್ಪಟ್ಟದ್ದಾಗಿಯೂ, ಇರತಕ್ಕದ್ದು.

ಕಕ್ಕಸುಗಳ ಸುತ್ತಲು ಇರಬೇಕಾದ ಬೈಲು ಪ್ರದೇಶ.

25. ಬಂದು ಕಟ್ಟಡದ ಸಂಬಂಧವಾಗಿ ಕಕ್ಕಸನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು ಚೇರ್ಮೆರಿಗೆ ಸಮಾಧಾನವಾಗುವಂತೆ ಗಾಳಿ ಜಲನೆಗೆ ಸಾಕಾದಷ್ಟು ದ್ವಾರ ಯಾ ದ್ವಾರಗಳನ್ನು ಅಂಥ ಕಕ್ಕಸಿಗೆ ಇಡತಕ್ಕದ್ದು. ಅಂಥ ದ್ವಾರ ಯಾ ದ್ವಾರಗಳು, ಮೇಲ್ಬಾಗಕ್ಕೆ ಸಾಧ್ಯವಾದ ಮಟ್ಟಿಗೂ ಸಮೀಪದಲ್ಲಿರುವದಾಗಿಯೂ, ಮತ್ತು ನೇರವಾಗಿ ಹೊರಗಿನ ಗಾಳಿಯ ಸಂಪರ್ಕವನ್ನು ಉಂಟಾದ್ದಾಗಿಯೂ, ಇರತಕ್ಕದ್ದು.

ಕಕ್ಕಸುಗಳ ಗಾಳಿಯ ಜಲನೆ.

ಕಕ್ಕಸಿನ ಮೇಲೆ ಯಾವ ಕೊಠಡಿಯು ಕಟ್ಟಲ್ಪಡಕೂಡದು.

26. ಯಾವ ಮನುಷ್ಯನಾದರೂ ಹಳೆ ಯಾ ಹೊಸ ಕಕ್ಕಸಿನ ಮೇಲ್ಗಡೆ ಮತ್ತೊಂದು ಕಕ್ಕಸು ಯಾ ಸ್ನಾನದ ಸ್ಥಳ ಯಾ ಬಚ್ಚಲುಮನೆ, ಇವುಗಳನ್ನು ವಿನಹಾ ಯಾವ ಕೊಠಡಿಯನ್ನು ಯಾ ಕಟ್ಟಣವನ್ನು ಕಟ್ಟಕೂಡದು.

ಪಾಯಿಖಾನೆ ವಗೈರೆಯ ಗುಂಡಿಗಳನ್ನು ಪಾಕೀಜು ಮಾಡುವಿಕೆ.

27. ಬಂದು ಮನೆಯ ಆವರಣದೊಳಗೆ ಮತ್ತು ಅದರ ಸಮೀಪದಲ್ಲಿ ಇರತಕ್ಕ ಗಲೀಜಾದ ಪಾಯಿಖಾನೆ, ಗುಂಡಿಗಳು ವ ರೊಚ್ಚಿ ಗುಂಡಿಗಳು; ವಿಶೇಷ ಸಂದರ್ಭ ಯಾ ಸಂದರ್ಭಗಳಲ್ಲಿ ವಾಯಿದೆಯನ್ನು ಬಹಾಯಿಸತಕ್ಕದ್ದು ಅವಶ್ಯಕವೆಂದು ಚೇರ್ಮೆರು ಎಣಿಸಿದ ಹೊರತು, ಸದರಿ ಚೇರ್ಮೆರಿಂದ ಆ ಬಗ್ಗೆ ಕೊಡಲ್ಪಡುವ ನೋಟೀಸಿನ ಎರಡು ದಿನಗಳೊಳಗಾಗಿ, ಪೂರ್ತಿ ಮಾಡಲ್ಪಟ್ಟು ಮುಚ್ಚಲ್ಪಡತಕ್ಕದ್ದು.

ಉಪನಿಬಂಧನೆಗಳಿಗೆ ವಿರುದ್ಧವಾದ ನಡವಳಿಕೆಗಳನ್ನು ತಿದ್ದುಪಡಿ ಮಾಡತಕ್ಕದ್ದು.

28. ಕಟ್ಟಣದ ಕಾಮಗಾರಿ ನಡಿಯುತ್ತಿರುವಾಗಾಗಲೀ, ಅಥವಾ ಕಟ್ಟಡವು ಪೂರೈಸಿದ ಮೇಲಾಗಲೀ ಯಾವ ದಾದರು ಯುಕ್ತವಾದ ಕಾಲದಲ್ಲಿ, ಚೇರ್ಮೆರಿಂದ, ಅಂಥಾ ಕಟ್ಟಣದ ಕಟ್ಟುವಿಕೆಯು ಹೊಸ ಕಟ್ಟಡಗಳಿಗೆ ಸಂಬಂಧಿಸುವ ಯಾವದಾದರೂ ಉಪನಿಬಂಧನೆಗೆ ವಿರೋಧವಾಗಿರಬದುದಾದಂಥ ವಿಷಯವನ್ನು ನಮೂದು ಮಾಡಿರುವದಾಗಿಯೂ, ಮತ್ತು ನಮೂದು ಮಾಡಲ್ಪಡುವ ಯುಕ್ತವಾದ ಬಂದು ಗಡವಿನಲ್ಲಿ ಯಾವದಾದರೂ ಮಾಡಿರುವದನ್ನು ಯಾ ಬಿಟ್ಟಿರುವದನ್ನೂ, ಸದರಿ ಉಪನಿಬಂಧನೆಗೆ ಅನುಗುಣವಾಗಿ ಸರಿಪಡಿಸುವಂತೆ ನಿಯಮಿಸುವದಾಗಿಯೂ, ಇರುವ ನೋಟೀಸನ್ನು ಯಾವ ಮನುಷ್ಯನು ಹೊಂದುತ್ತಾನೆಯೋ, ಅಂಥ ಮನುಷ್ಯನು, ಅಂಥ ಪ್ರತಿಯೊಂದು ಸಂದರ್ಭದಲ್ಲೂ, ಸದರಿ ನಿಯಮಕಗಳು ಅಂಥ ಕಟ್ಟಣದ ಕಟ್ಟುವಿಕೆಯು ಅಂಥ ಯಾವದಾದರು ಉಪನಿಬಂಧನೆಗೆ ವಿರುದ್ಧವಾಗಿರಬಹುದಾದ ಅಂಕಗಳಿಗೆ ಎಷ್ಟರವಮಟ್ಟಿಗೆ ಸಂಬಂಧಿಸುತ್ತವೋ, ಅಷ್ಟರ ಮಟ್ಟಿಗೆ, ಅಂಥ ನೋಟಿಸಿನಲ್ಲಿ ನಮೂದಾದ ವಾಯಿದೆಯೊಳಗಾಗಿ, ಅದರಲ್ಲಿನ ನಿಯಮಕಗಳೊಂದೊಂದರ ಮೇರಿಗೂ, ನಡೆದುಕೊಳ್ಳತಕ್ಕದ್ದು.

ತಿದ್ದುಪಾಡುಗಳು ಪೂರೈಸಿದ ಬಗ್ಗೆ ನೋಟಿಸು.

29. ಅಂಥ ಯಾವದಾದರೂ ನಿಯಮಕದ ಮೇರಿಗೆ ನಡಿಸಲ್ಪಟ್ಟ ಕೆಲಸವು ಪೂರೈಸಿದ ಮೇಲೆ, ಬಂದು ನ್ಯಾಯವಾದ ವಾಯಿದೆಯೊಳಗಾಗಿ, ಅಂಥ ಮನುಷ್ಯನು ಚೇರ್ಮೆರಿಗೆ ಆಫಿಸಿನಲ್ಲಿ, ಬರಹಮೂಲಕ ಅಂಥ ಕೆಲಸವು ಪೂರೈಸಿದ ಬಗ್ಗೆ ನೋಟಿಸನ್ನು ತಂದು ಕೊಡತಕ್ಕದ್ದು ಯಾ ಕಳುಹಿಸತಕ್ಕದ್ದು. ಅಥವಾ ತಂದುಕೊಡುವಂತೆಯಾದರೂ ಯಾ ಕಳುಹಿಸುವಂತೆಯಾದರೂ ಮಾಡತಕ್ಕದ್ದು.

ಕಟ್ಟಡಗಳು ಪೂರೈಸಿದ ಬಗ್ಗೆ ನೋಟಿಸ್.

30. ಬಂದು ಕಟ್ಟಡವನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ಕಟ್ಟಡವನ್ನು ಕಟ್ಟಿದ್ದು ಪೂರೈಸಿದ ನಂತರ, ಬಂದು ತಿಂಗಳೊಳಗಾಗಿ, ಅಂಥ ಕಟ್ಟಡದ ಕಟ್ಟುವಿಕೆಯು ಪೂರೈಸಿದ ಬಗ್ಗೆ, ಲಿಖಿತಮೂಲಕ, ಚೇರ್ಮೆರಿಗೆ ಆಫೀಸಿನಲ್ಲಿ, ನೋಟೀಸನ್ನು ತಂದುಕೊಡತಕ್ಕದ್ದು ಯಾ ಕಳುಹಿಸಿಕೊಡತಕ್ಕದ್ದು, ಅಥವಾ ತಂದುಕೊಡುವಂತೆ ಯಾಗಲಿ ಕಳುಹಿಸಿಕೊಡುವಂತೆಯಾಗಲಿ ಮಾಡತಕ್ಕದ್ದು.

348

31. ಉದ್ದೇಶಿಸಿರುವ ಹೊಸ ಬಡಾವಣೆಗಳೆಲ್ಲೂ, ಮತ್ತು ಸಹಕಾರಿಯಾದ ಸಂದರ್ಭಗಳಿಗನುಗುಣವಾಗಿ ಪಟ್ಟಣದಲ್ಲಿ ಎಲ್ಲಿ ಸಾಧ್ಯವೋ, ಅಂಥ ದರೋಬಸ್ತು ಪ್ರದೇಶಗಳಲ್ಲಿಯೂ, ಹೊಸದಾಗಿ ಕಟ್ಟಲ್ಪಡತಕ್ಕ ಪ್ರತಿಯೊಂದು ಮಾಸದ ವಹಾರವು, ಸುತ್ತಮುತ್ತಲೂ ಹೊರಗಿನ ಗಾಳಿಯ ಸಂಪರ್ಕವನ್ನುಂಟಾಗಿರುವಂತೆ ಇರತಕ್ಕದ್ದು.

32. ಯಾವನು ಮೇಲ್ಕಂಡ ಉಪನಿಬಂಧನೆಗಳ ಸಮಾಧಾನಾರ್ಥವಾಗಿ, ಒಂದು ಹೊಸ ಕಟ್ಟಡದ ಬಗ್ಗೆ ಲೈಸೆನ್ಸನ್ನು ಕೊಡಲ್ಪಟ್ಟವನಾಗಿ, ಸದರಿ ಕಟ್ಟಡವನ್ನು ಆರು ತಿಂಗಳಿಗೆ ಮೇಲ್ಪಟ್ಟುಂಥಾ ಯಾವ ಕಾಲದ ಪರಿಯಂತರವಾಗಲಿ ಪೂರೈಸದೆ ಇರುತ್ತಾನೋ, ಅಂಥವನು ನೋಟಿಸ್ ಜಾರಿಯಾದ ನಂತರ ಸದರಿ ಕಟ್ಟಡವು ಪೂರ್ತಿಯಾಗುವದಕ್ಕೆ, ಟ್ರಸ್ಟಿಗಳಿಂದ ಗೊತ್ತುಮಾಡಲ್ಪಡುವ ಒಂದು ನ್ಯಾಯವಾದ ಗಡುವಿನಲ್ಲಿ ಅದನ್ನು ಮುಗಿಸಿ ಪೂರೈಸತಕ್ಕದ್ದು. ತಪ್ಪಿದಲ್ಲಿ, ಲಾಗವಡಿಗೂ ಮತ್ತು ನಷ್ಟಕ್ಕೂ ಮಾಲೀಕನನ್ನು ಗರಿಪಡಿಸಿ, ಸದರಿ ಕಟ್ಟಡವನ್ನು ಮುಗಿಸುವದಕ್ಕೂ ಮತ್ತು ಅಂಥ ಕಾಂಟ್ರಾರಿಯ ಲಾಗವಡನ್ನು ಬರಮಾಡಿಕೊಳ್ಳುವದಕ್ಕೂ, ಅಥವಾ ಸದರಿ ಕಟ್ಟಡವನ್ನು ಕಿತ್ತುಹಾಕುವದಕ್ಕೂ, ಟ್ರಸ್ಟಿನವರು ಅರ್ಹರಾಗಿರುತ್ತಾರೆ.

33. ಉತ್ತಮವಾದ ಹವ ಯಾ ಆರೋಗ್ಯ, ಇವುಗಳ ನಿಮಿತ್ತವಾಗಿ ಕಟ್ಟಡವನ್ನು ರೂಪಾಂತರ ಪಡಿಸುವದಕ್ಕಾಗಲಿ ಯಾ ಗಾಳಿವಾಟವನ್ನು ಕಲ್ಪಿಸುವದಕ್ಕಾಗಲಿ, ಟ್ರಸ್ಟಿಗಳಿಂದ ಆಜ್ಞಾಪಿಸಲ್ಪಡಬಹುದಾದ ಯಾವ ಮನುಷ್ಯನಾದರು, ಆ ಮೇರಿಗೆ ಮಾಡತಕ್ಕ ಬಗ್ಗೆ ತನಿಗೆ ಚೇರ್ಮೆರಿಂದ ಕೊಡಲ್ಪಡುವ ನೋಟಿಸ್ ಜಾರಿಖಿನ ಒಂದು ತಿಂಗಳೊಳಗೆ, ಅಥವಾ ಚೇರ್ಮೆರಿಗೆ ಅಯಾ ಸಂದರ್ಭಗಳ ಮೇರೆ ಸೂಕ್ತವೆಂದು ತೋರುವಂಥ ಹೆಚ್ಚು ವಾಯಿದೆ ವಳಗಾಗಿ, ಆ ಮೇರಿಗೆ ಮಾಡತಕ್ಕದ್ದು.

34. ಮೇಲ್ಕಂಡ ಬೈಲಾಸ್ ಯಾನೆ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡಿಯುವ ಪ್ರತಿಯೊಬ್ಬ ಮನುಷ್ಯನು 20 ರೂಪಾಯಿಗಳ ವರಿಗೆ ಆಗಬಹುದಾದ ಜುರ್ಮಾನೆಗೂ, ಮತ್ತು ನಡೆದುಕೊಂಡು ಬರುವ ತಪ್ಪಿತಕ್ಕೆ ಮೊದಲಿನ ತಪ್ಪು ಸ್ಥಾಪಿತವಾದ ನಂತರವಾಗಲಿ, ಅಥವಾ ನಿಬಂಧನೆಗೆ ವಿರುದ್ಧವಾಗಿ ನಡಿಯದಿರುವಂತೆ ಚೇರ್ಮೆರಿಂದ ಲಿಖಿತಮೂಲಕ ನೋಟಿಸ್ ತಲಪಿದ ನಂತರವಾಗಲಿ, ಯಾವ ದಿನ ನಿಬಂಧನೆಗೆ ವಿರುದ್ಧವಾಗಿ ನಡಿಯುವದಾಗುತ್ತೋ, ಅಂಥ ಪ್ರತಿದಿನಕ್ಕೂ 10 ರೂಪಾಯಿಗಳ ವರಿಗೆ ಜುರ್ಮಾನೆಗೂ ಗುರಿಯಾಗುವನು.

ದಂಡನೆಗಳು.

35. ಮೇಲ್ಕಂಡ ಯಾವದಾದರೂ ಉಪನಿಬಂಧನೆಗಳ ಮೇರಿಗೆ, ಯಾವಕಾದರು ಮಾಡುವಿಕೆಯು ಆಗಲಿ ಯಾ ಮಾಡದೆ ಇರುವಿಕೆಯೆ ಆಗಲಿ, ಅಥವಾ ಯಾವದಾದರೂ ನಡವಳಿಕೆಯ ಚೈತನ್ಯತ್ವವೇ ಆಗಲಿ, ಚೇರ್ಮೆರವರ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆಯಾ ಬಿಪ್ಪಿಕೆಯನ್ನು, ಆಕ್ಷೇಪಿಸಿರುವ ಪಕ್ಷದಲ್ಲಿ, ಚೇರ್ಮೆರಿಂದ ದಸ್ತತ ಮಾಡಲ್ಪಟ್ಟು ಅವರ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆಯ ಬಿಪ್ಪಿಕೆಯನ್ನು ತೆಗೆಸುವ ಯಾ ತೋರ್ಪಡಿಸುವ ಬಂದು ಲಿಖಿತ ದಸ್ತ್ತಾವೇಜು, ಅಂಥ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆ, ಯಾ ಬಿಪ್ಪಿಕೆಗೆ ಸಾಕಾದ ಪ್ರಬಲ ಪ್ರಧಾನ ಸಾಕ್ಷ್ಯವಾಗಿರತಕ್ಕದ್ದು

ಅಧಿಕಾರ, ಕರ್ತವ್ಯ ಯಾ ಕೆಲಸದ ಚಲಾವಣೆ ಬಗ್ಗೆ ಸಾಕ್ಷ್ಯವು.

ಈ ಉಪನಿಬಂಧನೆಗಳ ಮೇರಿಗೆ, ಪರಿಮಾಣಗಳು, ವಿಧಿಸಲ್ಪಟ್ಟಿರುವ ದರೋಬಸ್ತು ಸಂದರ್ಭಗಳೆಲ್ಲೂ ಸದರಿ ಪರಿಮಾಣಗಳನ್ನು ಆ ಬಗ್ಗೆ ದರಖಾಸ್ತು ಮಾಡಲ್ಪಟ್ಟಲ್ಲಿ, ಬದಲಾಯಿಸುವದಕ್ಕೆ ಅಪ್ಪಣೆ ಕೊಡಲು ಚೇರ್ಮೆರಿಗೆ ಅಧಿಕಾರವಿರತಕ್ಕದ್ದು.

20	Tuesday	ಮಂಗಳವಾರ	Bhadrapada Bahula. ಭಾದ್ರಪದ ಬಹುಳ.	11	20—53	Paratasi. ಪರಟಾಸಿ.	6	ರೇವತಿ	1—53	5—50	5—57	3— 5	2—12
21	Wednesday	ಬುಧವಾರ		12	24—30		7	ಅಶ್ವಿನಿ	7—19	5—50	5—57	3—47	3— 1
22	Thursday ○	ಗುರುವಾರ ○		13	29— 0		8	ಭರಣಿ	11—46	5—50	5—56	4—28	3—48
H. 23	Friday	ಶುಕ್ರವಾರ		14	33—51		9	ಕೃತ್ತಿಕ	15— 2	5—50	5—56	5— 6	4—36
24	Saturday	ಶನಿವಾರ		15	39— 8		10	ರೋಹಿಣಿ	17—17	5—50	5—55	5—45	5—22
25	Sunday	ಭಾನುವಾರ		1	44— 2		11	ಮೃಗಶಿರ	17—55	5—50	5—54	6—26	6— 7
26	Monday	ಸೋಮವಾರ		2	48—31		12	ಆರ್ದ್ರ	17—33	5—51	5—53	7— 6	6—53
27	Tuesday	ಮಂಗಳವಾರ		3	51—50		13	ಪುನರ್ವಸು	16— 8	5—51	5—52	7—47	7—40
28	Wednesday	ಬುಧವಾರ		4	53—58		14	ಪುಷ್ಯ	13—49	5—51	5—51	8—30	8—29
29	Thursday	ಗುರುವಾರ		5	54—47		15	ಆಶ್ಲೇಷ	10—44	5—51	5—51	9—17	9—17
30	Friday	ಶುಕ್ರವಾರ			54—22		16	ಮಘ	7— 4	5—51	5—50	10— 5	10— 8

Full Moon. ○
ಹುಣ್ಣಿಮೆ.

New Moon. ○
ಅಮಾವಾಸ್ಯೆ.

ರಾಹುಕಾಲ.

ಭಾನುವಾರ	ಸಾಯಂಕಾಲ	4½	ಗಂಟೆ ಯಿಂದ	6 ಗಂಟೆ ವರಗೆ.
ಸೋಮವಾರ	ಬೆಳಿಗ್ಗೆ	7½	,,	9 ,,
ಮಂಗಳವಾರ	ಸಾಯಂಕಾಲ	3	,,	4½ ,,
ಬುಧವಾರ	ಬೆಳಿಗ್ಗೆ	12	,,	1½ ,,
ಗುರುವಾರ	ಸಾಯಂಕಾಲ	1½	,,	3 ,,
ಶುಕ್ರವಾರ	ಬೆಳಿಗ್ಗೆ	10½	,,	12 ,,
ಶನಿವಾರ	,,	9	,,	10½ ,,

ಗುಳಿಕಕಾಲ.

ಭಾನುವಾರ	ಸಾಯಂಕಾಲ	3	ಗಂಟೆ ಯಿಂದ	4½ ಗಂಟೆ ವರಗೆ.
ಸೋಮವಾರ	,,	1½	,,	3 ,,
ಮಂಗಳವಾರ	,,	12	,,	1½ ,,
ಬುಧವಾರ	ಬೆಳಿಗ್ಗೆ	10½	,,	12 ,,
ಗುರುವಾರ	,,	9	,,	10½ ,,
ಶುಕ್ರವಾರ	,,	7½	,,	9 ,,
ಶನಿವಾರ	,,	6	,,	7½ ,,

GOVERNMENT HOLIDAYS.—ಸರ್ಕಾರದ ರಜಾ ದಿವಸಗಳು.

H. 12th Gouri — ಗೌರಿ.
G. 13th Ganesa. — ಗಣೇಶ.
H. 23rd Anantachaturdasi. — ಅನಂತನ ಚತುರ್ದಶಿ.

MYSORE GAZETTE OFFICE,
BANGALORE.

G. HUME WRIGHT,
Compiler, Mysore Gazette.

Mysore Govt. Central Press, Bangalore—1904.

CALENDAR FOR SEPTEMBER 1904.

Kanarese year— Krodhi.

ಚಾಂದ್ರಮಾನ ವರುಷ— ಕ್ರೋಧಿ.

1904ನೆ ಇಸವಿ ಸೆಪ್ಟೆಂಬರು ಮಾಹೆ. ಪಂಚಾಂಗ.

Date of the Month. ತಾರೀಖು.	Days of the Week. ವಾರಗಳ ಹೆಸರು.		Kanarese. ಚಾಂದ್ರಮಾನ.			Tamil. ಸೌರಮಾನ		Stars. ನಕ್ಷತ್ರ.		The Sun. ಸೂರ್ಯ.		The Moon. ಚಂದ್ರ.	
	English. ಇಂಗ್ಲಿಷ್.	Kanarese. ಕನ್ನಡ.	Month. ಮಾಸ.	Date. ತಿಥಿ.	Time. ಕಾಲ.	Month. ಮಾಸ.	Date. ತೇದಿ.	Name. ಹೆಸರು.	Time. ಕಾಲ.	Rises. ಉದಯ.	Sets. ಅಸ್ತ.	Rises. ಉದಯ.	Sets. ಅಸ್ತ.
1	2	3	4	5	6	7	8	9	10	11	12	13	14
					ಘಳಿಗೆ. ವಿಘಳಿಗೆ.				ಘಳಿಗೆ.ವಿಘಳಿಗೆ.	ಘಂ. ನಿಮಿಷ	ಘಂ. ನಿಮಿಷ.	ಘಂ. ನಿಮಿಷ. ರಾತ್ರಿ	ಘಂ. ನಿಮಿಷ ಪ್ರಾತಃ
1	Thursday	ಗುರುವಾರ	Sravana Bahula. ಶ್ರಾವಣ ಬಹುಳ.	6	21—58	Avani. ಆವಣಿ.	17	ಆಶ್ಲೇಷ	51— 4	5—50	6—10	10—32	10—31
2	Friday	ಶುಕ್ರವಾರ		7	22—35		18	ಮಖ	43—19	5—50	6— 9	11—20	11—21
3	Saturday	ಶನಿವಾರ		8	22— 2		19	ಪುಬ್ಬ	54— 8	5—50	6— 9		ಮಧ್ಯಾನ್ನ
4	Sunday	ಭಾನುವಾರ		9	20—14		20	ಉತ್ತರ	58—55	5—50	6— 8	ಪ್ರಾತಃ	12—13
5	Monday	ಸೋಮವಾರ		10	17—20		21	ಹಸ್ತ	34—49	5—50	6— 7	0—10	1— 6
6	Tuesday	ಮಂಗಳವಾರ		11	15—29		22	ಚಿತ್ತ	31— 2	5—50	6— 6	1— 5	2— 1
7	Wednesday	ಬುಧವಾರ		12	8—48		23	ಸ್ವಾತಿ	27—48	5—50	6— 6	2— 2	2—57
8	Thursday ●	ಗುರುವಾರ ●		14	3—28		24	ವಿಶಾಖ	25— 9	5—50	6— 6	3— 2	3—53
9	Friday	ಶುಕ್ರವಾರ		30	51—40		25	ಅನೂರಾಧ	23—24	5—50	6— 5	4— 4	4—48
10	Saturday	ಶನಿವಾರ		1	45—30		26	ಜ್ಯೇಷ್ಠ	22—40	5—50	6— 4	5— 5	5—41
11	Sunday	ಭಾನುವಾರ		2	31—22		27	ಮೂಲ	23— 6	5—50	6— 3	6— 7	6—42
H. 12	Monday	ಸೋಮವಾರ		3	33—52		28	ಪೂರ್ವಾಷಾಢ	24—36	5—50	6— 3	7— 6	7—26
G. 13	Tuesday	ಮಂಗಳವಾರ		4	28—44		29	ಉತ್ತರಾಷಾಢ	27—36	5—50	6— 2	8— 5	8—16
14	Wednesday	ಬುಧವಾರ		5	24—24		30	ಶ್ರವಣ	31—40	5—50	6— 1	9— 4	9— 6
15	Thursday	ಗುರುವಾರ	Bhadra Shuddha. ಭಾದ್ರಪದ ಶುದ್ಧ.	6	20—54		1	ಧನಿಷ್ಠ	36—46	5—50	6— 1	10— 2	9—58
16	Friday	ಶುಕ್ರವಾರ		7	18—28		2	ಶತಭಿಷ	42—43	5—50	6— 0	10—58	10—49
17	Saturday	ಶನಿವಾರ		8	17—10		3	ಪೂರ್ವಾಭಾದ್ರ	49—11	5—50	5—59	11—52	11—40
18	Sunday	ಭಾನುವಾರ		9	17— 9		4	ಉತ್ತರಾಭಾದ್ರ	55—46	5—50	5—59	ಮಧ್ಯಾನ್ನ 12—44	ಪ್ರಾತಃ 0—32